ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ____________________

ಪತ್ರಿಕೆಯ ಹೆಸರು : NAME OF THE NEWS PAPER: ______________ ದಿನಾಂಕ : DATE : 22/3/2020

# ಅಧಿವೇಶನ ಮುಂದೂಡಿ

**ಬೆಂಗಳೂರು:** ತಕ್ಷಣ ಅಧಿವೇಶನವನ್ನು ಮುಂದೂಡಿ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಟ್ವಿಟರ್‌ನಲ್ಲಿ ಈ ಮೂಲಕ ಆಗ್ರಹಿಸಿರುವ ಅವರು, 'ಸರಕಾರ ಹೇಳುವುದು ಒಂದು, ಮಾಡುವುದು 'ಇನ್ನೊಂದು' ಎಂಬ ಸಾರ್ವಜನಿಕ ಜಿಜ್ಞಾಸೆಗೆ ಒಳಗಾಗಬಾರದು. ವೈರಸ್ ತಡೆಗಟ್ಟಲು ಸ್ವಯಂ ನಿರ್ಬಂಧ' ಪಾಲಿಸುವಂತೆ ಜನತೆಗೆ ಹೇಳುತ್ತಿರುವ ಸರಕಾರ ಅಧಿವೇಶನ ನಡೆಸಬಾರದು,'' ಎಂದಿದ್ದಾರೆ.



''ನೂರಾರು ಜನಪ್ರತಿನಿಧಿಗಳು, ಅಧಿಕಾರಿಗಳು, ಪತ್ರಕರ್ತರು ಹಾಗೂ ಜನರು ಜಮಾಯಿಸುವ ಅಧಿವೇಶನ ನಡೆಸುವುದು ವಾಸ್ತವ ಪರಿಸ್ಥಿತಿಯಲ್ಲಿ ಸರಿಯಲ್ಲ. ಎಲ್ಲಾ ಬ್ಯಾಂಕ್‌ಗಳು ತುರ್ತಾಗಿ ಎಟಿಎಂಗಳಲ್ಲಿ ಹ್ಯಾಂಡ್ ಸ್ಯಾನಿಟೈಸರ್‌ಗಳನ್ನು ಕಡ್ಡಾಯ ಇಡಬೇಕು,'' ಎಂದು ಆಗ್ರಹಿಸಿದ್ದಾರೆ.

## ಸ್ಪೀಕರ್‌ಗೆ ಬಿಟ್ಟ ವಿಚಾರ

ಕುಮಾರಸ್ವಾಮಿ ಯಾವಾಗ ಏನು ಟ್ವೀಟ್ ಮಾಡುತ್ತಾರೆ ಗೊತ್ತಿಲ್ಲ, ಅಧಿವೇಶನ ನಡೆಸುವುದು ಸರಕಾರದ ಕೈಯಲಿಲ್ಲ, ಸ್ಪೀಕರ್‌ಗೆ ಬಿಟ್ಟ ವಿಚಾರ

– ಬಸವರಾಜ ಬೊಮ್ಮಾಯಿ ಸಚಿವ

**ಮೋದಿಗೆ ಬೆಂಬಲ:** ಸರಣಿ ಟ್ವೀಟ್ ಮೂಲಕ ಕೊರೊನಾ ವಿರುದ್ಧ ಹೋರಾಡುತ್ತಿರುವ ವೈದ್ಯರು, ಪೊಲೀಸರು, ಪೌರಕಾರ್ಮಿಕರಿಗೆ ಚಪ್ಪಾಳೆ ಗೌರವ ನೀಡುವಂತೆ ಪ್ರಧಾನಿ ಮೋದಿ ನೀಡಿರುವ ಕರೆ ಬೆಂಬಲಿಸುತ್ತೇನೆ. ಸೋಂಕಿನ ವಿರುದ್ಧ ಹೋರಾಡುವ ವೈದ್ಯ ಸಿಬ್ಬಂದಿಗೆ ಪ್ರೋತ್ಸಾಹ ಧನ ನೀಡಬೇಕು ಎಂದು ಮಾಜಿ ಸಿಎಂ ಕುಮಾರಸ್ವಾಮಿ ಆಗ್ರಹಿಸಿದ್ದಾರೆ.